**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ರವರು ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ವಿಷಯಕ್ಕೆ ಉತ್ತರ:**

**ವಿಷಯ:** ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಅಣ್ಣೇಪುರ ಗ್ರಾಮದ ಸರ್ವೇ ನಂ.18 ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.143 ರಲ್ಲಿ 2-08 ಎಕರೆ ವಿಸ್ತೀರ್ಣದ ಜಮೀನನ್ನು ಹಾಪ್ ಕಾಮ್ಸ್ ಸಂಸ್ಥೆಯವರು ನಿಯಮಬಾಹಿರವಾಗಿ ಭೂಮಾಲೀಕರಿಗೆ ಪರಿಹಾರ ನೀಡದೇ ಆಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಮೂಲ ಮಾಲೀಕರನ್ನು ಗುರುತಿಸಿ ಪರಿಹಾರ ನೀಡುವ ಬಗ್ಗೆ ಸರ್ಕಾರವು ಕ್ರಮ ಕೈಗೊಂಡಿದೆಯೇ?

ಜಮೀನಿನ ಮೂಲ ಮಾಲೀಕರನ್ನು ಗುರುತಿಸಿ ಪರಿಹಾರ ನೀಡುವ ಬಗ್ಗೆ ನಿರ್ದಿಷ್ಟ ಸಮಯವನ್ನು ಕೋರಿ ಮಾನ್ಯ ತೋಟಗಾರಿಕೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

1. ಬೆಂಗಳೂರು ಉತ್ತರ ತಾಲ್ಲೂಕು, ಅಣ್ಣೇಪುರ ಗ್ರಾಮದ ಸರ್ವೇ ನಂ.18, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.143 ರಲ್ಲಿ 2-03 ಎಕರೆ ವಿಸ್ತೀರ್ಣದ ಜಮೀನು 1980 ರಿಂದ 42 ವರ್ಷಗಳ ಕಾಲ ಹಾಪ್ ಕಾಮ್ಸ್ ಬೆಂಗಳೂರು ಸಂಸ್ಥೆಯ ಅನುಭವದಲ್ಲಿದೆ. ಸದರಿ ಪ್ರಸ್ತಾಪಿತ ಜಮೀನನ್ನು ಹಾಪ್ ಕಾಮ್ಸ್ ಸಂಸ್ಥೆಯು ನಿಯಮಬಾಹಿರವಾಗಿ ಆಕ್ರಮಿಸಿಕೊಂಡಿರುವುದಿಲ್ಲ.
2. ದಿನಾಂಕ:18.08.2022 ರಂದು ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ:ಡಿಎ/ವಾ-143/ಪಿಆರ್/131/22-23 ರ ಪತ್ರದಲ್ಲಿ ಸದರಿ ಸ್ವತ್ತಿನ ಮಾಲೀಕರ ಹೆಸರು ಸರ್ಕಾರಿ ಸ್ವತ್ತು ಎಂದು ತಿಳಿಸಿರುತ್ತಾರೆ.
3. ಸದರಿ ಸ್ವತ್ತಿನ ಹಕ್ಕುದಾರಿಕೆಗೆ ಸಂಬಂಧಿಸಿದಂತೆ ಶ್ರೀಮತಿ ನಾರಾಯಣಮ್ಮ ಇತರರು ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ ಓ.ಎಸ್. ನಂ: 1881/2013 ಅನ್ನು ದಾಖಲಿಸಿದ್ದು ಪ್ರಕರಣವು ವಿಚಾರಣ ಹಂತದಲ್ಲಿ ಇರುತ್ತದೆ.
4. ಸದರಿ ಸ್ವತ್ತಿನ ಹಕ್ಕುದಾರಿಕೆಗೆ ಸಂಬಂಧಿಸಿದಂತೆ ಮ: ಚರಿಷ್ಮಾ ಬಿಲ್ಡರ್ಸ್ ರವರು ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ ಓ ಎಸ್ ನಂ 1439/2017 ಅನ್ನು ದಾಖಲಿಸಿದ್ದು ಪ್ರಕರಣವು ವಿಚಾರಣ ಹಂತದಲ್ಲಿ ಇರುತ್ತದೆ.
5. ಸದರಿ ಸ್ವತ್ತಿನ ಹಕ್ಕುದಾರಿಕೆಗೆ ಸಂಬಂಧಿಸಿದಂತೆ ನಬಿಷಾ ದರ್ಗಾ ಆಡಳಿತ ಮಂಡಳಿಯು ವಕ್ಫ್ ಬೋರ್ಡ್ ನಲ್ಲಿ ದೂರು ಸಂಖ್ಯೆ ಬಿ.ಎನ್.ಯು/1/95-96 ದಾಖಲಿಸಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.
6. ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯ ನಿರ್ದೇಶನದಂತೆ ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ, ಕಂದಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸತ್ಯಶೋಧನಾ ಸಮಿತಿಯು ತನ್ನ ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸ್ವತ್ತಿನ ವಿಚಾರದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಇತರೆ ನ್ಯಾಯಾಲಯಗಳಲ್ಲಿ ಒಂದಕ್ಕಿಂತ ಹೆಚ್ಚಿನ ಹಕ್ಕುದಾರರು ದಾವೆ ಹೂಡಿದ್ದು ಈ ಪೈಕಿ ವಕ್ಫ್ ಬೋರ್ಡ್ ಸಂಸ್ಥೆಯು ಸಹ ಹಕ್ಕುದಾರರಲ್ಲಿ ಒಂದಾಗಿರುತ್ತದೆ. ಹಾಪ್ ಕಾಮ್ಸ್ ಮತ್ತು ವಕ್ಫ್ ಬೋರ್ಡ್ ಗಳು ಎರಡೂ ಸರ್ಕಾರಿ ಸಂಸ್ಥೆಗಳಾಗಿರುವುದರಿಂದ ಒಟ್ಟಾರೆಯಾಗಿ ಸರ್ಕಾರಿ ಆಸ್ತಿಯನ್ನು ಖಾಸಗಿಯವರಿಂದ ರಕ್ಷಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿರುತ್ತದೆ ಎಂದು ಅಭಿಪ್ರಾಯಿಸಿರುತ್ತದೆ.
7. ಸದರಿ ಜಮೀನಿನ ಮೂಲ ಮಾಲೀಕತ್ವದ ಕುರಿತು ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಪ್ರಸ್ತುತ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**HORTI 440 HGM 2020**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು